# ಬನಶಂಕರಿಯಲ್ಲಿ ಪ್ರಸ್ತಾವಿತ ಸ್ಕೈವಾಕ್‌ನ ಸಂಕ್ಷಿಪ್ತ ವಿವರಗಳು –ಬನಶಂಕರಿ ಮೆಟ್ರೋ ನಿಲ್ದಾಣ–ಬನಶಂಕರಿ ದೇವಸ್ಥಾನ–ಬನಶಂಕರಿ ಟಿಟಿಎಂಸಿ ಸಂಪರ್ಕಿಸುವ ಸ್ಕೈವಾಕ್

ನಗರದಲ್ಲಿರುವ ಬನಶಂಕರಿ ಜಂಕ್ಷನ್, ಭಾರೀ ಸಂಚಾರ ಮತ್ತು ಬಿಡುವಿಲ್ಲದ ಛೇದಕದಿಂದ ಕೂಡಿದ್ದು, ದಿನದ 24 ಗಂಟೆಯೂ ವ್ಯಾಪಕ ಚಟುವಟಿಕೆಗಳು ನಡಯುವ ತಾಣವಾಗಿದೆ. ಬನಶಂಕರಿ ಟಿಟಿಎಂಸಿ ಮತ್ತು ಮೆಟ್ರೋ ನಿಲ್ದಾಣದ ಕೂಡು ಪ್ರದೇಶವಾಗಿರುವ ಈ ಪ್ರದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ನಗರದ ವಿವಿಧ ಭಾಗಗಳಿಗೆ ಸಂಚರಿಸುವುದರಿಂದ ಇದು ಪ್ರಮುಖ ಕೇಂದ್ರವಾಗಿ ಬೆಳೆಯುತ್ತಿದೆ. ಇದಲ್ಲದೇ ಧಾರ್ಮಿಕ ಕೇಂದ್ರವಾಗಿರುವ ಬನಶಂಕರಿ ದೇವಸ್ಥಾನವು ಹೆಚ್ಚುವರಿಯಾಗಿ ಅಸಂಖ್ಯಾತ ಭಕ್ತಾದಿಗಳನ್ನು ಆಕರ್ಷಿಸುತ್ತಿದೆ. ಇಲ್ಲಿನ ಬೀದಿ ಮಾರುಕಟ್ಟೆಯಲ್ಲಿ ತಾಜಾ ಹಣ್ಣುಗಳು ಮತ್ತು ತರಕಾರಿಗಳು, ಹೂವುಗಳು, ಕುಂಬಾರಿಕೆ ವಸ್ತುಗಳು ಮತ್ತು ಬೆತ್ತದ ಪೀಠೋಪಕರಣಗಳು ಮಾರಾಟವಾಗುತ್ತಿದ್ದು ನಗರದ ದಕ್ಷಿಣ ಭಾಗದಲ್ಲಿ ತಾಜಾ ಉತ್ಪನ್ನಗಳು ದೊರೆಯುವ ಪ್ರಮುಖ ಕೇಂದ್ರವಾಗಿದೆ.

ಹಲವಾರು ವರ್ಷಗಳ ಹಿಂದೆ ಇದ್ದ ಖಾಲಿ ಪ್ರದೇಶದಲ್ಲಿ ಹಾಲಿ ಇರುವ ಜಂಕ್ಷನ್ ವಿನ್ಯಾಸ ರೂಪುಗೊಂಡಿದೆ. ಅಸ್ತವ್ಯಸ್ತವಾದ ಸಾರಿಗೆ ವ್ಯವಸ್ಥೆ ಮತ್ತು ಪಾದಚಾರಿ ದಾಟುವಿಕೆ ಮಾರ್ಗಗಳಿಂದಾಗಿ, ಭಾರೀ ಬಸ್ಸುಗಳು ಮತ್ತು ವಾಹನ ಸಂಚಾರ ದಾಟಲು ಪಾದಚಾರಿಗಳು ಪರದಾಡುವಂತಾಗಿದೆ. ವ್ಯಾಪಾರಿಗಳಿಂದ ತರಕಾರಿಗಳು ಮತ್ತು ಹಣ್ಣುಗಳನ್ನು ರಸ್ತೆಯ ಮಧ್ಯಭಾಗದಲ್ಲೇ ಗ್ರಾಹಕರು ಖರೀದಿಸುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಜಂಕ್ಷನ್ ಮೂಲಕ ಹೆಚ್ಚಿನ ವಾಹನಗಳು ಸಂಚರಿಸುವುದರಿಂದ ಜಂಕ್ಷನ್ ಉದ್ದಕ್ಕೂ ವಿವಿಧ ಬಸ್‌ನಿಲ್ದಾಣಗಳು ತಲೆಎತ್ತಿವೆ ಹಾಗೂ ವಾಹನಗಳ ಸಂಚಾರ ಮಾರ್ಗ ಮಧ್ಯದಲ್ಲಿ ಬಸ್‌ಗಳನ್ನು ನಿಲುಗಡೆ ಮಾಡಬೇಕಾದ ಪರಿಸ್ಥಿತಿ ಉದ್ಭವವಾಗಿದೆ.

ಪ್ರಸ್ತಾವಿತ ಬನಶಂಕರಿ ಸ್ಕೈವಾಕ್ ಯೋಜನೆಯು ಸುಗಮ ವಾಹನ ಸಂಚಾರಕ್ಕೆ ಸಹಕಾರಿಯಾಗುವುದರ ಜೊತೆಗೆ ಗೊತ್ತುಪಡಿಸಿದ ಬಸ್‌ನಿಲ್ದಾಣಗಳು, ಪಾದಚಾರಿಗಳಿಗೆ ಸುರಕ್ಷಿತ ಮಾರ್ಗ ಮತ್ತು ಬೀದಿ ಬದಿ ವ್ಯಾಪಾರಿಗಳಿಗೆ ಸೂಕ್ತ ಸ್ಥಳಾವಕಾಶ ಒದಗಿಸಲಿದೆ. ಬೀದಿಯ ಮೊತ್ತೊಂದು ತುದಿಯಿಂದ ಸಂಚರಿಸುವ ಪಾದಚಾರಿಗಳಿಗೆ ಬಸ್‌ನಿಲ್ದಾಣ ಮತ್ತು ಮೆಟ್ರೋ ನಿಲ್ದಾಣಕ್ಕೆ ನೇರ ಸಂಪರ್ಕವನ್ನು ಈ ಸ್ಕೈವಾಕ್ ಒದಗಿಸುವುದರ ಜೊತೆಗೆ ಟಿಟಿಎಂಸಿ ಯಿಂದ ಮೆಟ್ರೋ ನಿಲ್ದಾಣಕ್ಕೆ ಸಂಚರಿಸುವ ಪ್ರಯಾಣಿಕರಿಗೆ ಸುರಕ್ಷಿತ ಮಾರ್ಗ ಒದಗಿಸಲಿದೆ. ನಗರದಾದ್ಯಂತ ಕಂಡುಬರುವ ಪಾದಚಾರಿ ಮೇಲ್ಸೇತುವೆಗಳಿಗೆ ಬದಲಾಗಿ ಹಸಿರು ಮತ್ತು ವಿಶ್ರಾಂತಿ ತಾಣಗಳನ್ನು ಹೊಂದಿರುವ ವೈವಿಧ್ಯಮಯ ಸಾರ್ವಜನಿಕ ಪ್ರದೇಶವಾಗಿ ಸ್ಕೈವಾಕ್ ಹೊರಹೊಮ್ಮಲಿದೆ. ಭೂಮಿ ಮತ್ತು ಆಕಾಶ ಮಾರ್ಗಗಳಿಗೆ ಸಂಪರ್ಕ ಕಲ್ಪಿಸುವುದರ ಜೊತೆಗೆ ಪಾದಚಾರಗಳಿಗೆ ಆಹ್ಲಾದಕರ ಅನುಭವ ನೀಡಲಿದೆ.

ಪ್ರಸ್ತಾವಿತ ಸ್ಕೈವಾಕ್ ಇತರೆ ಸೌಲಭ್ಯಗಳ ಜೊತೆಗೆ ಸಾರ್ವಜನಿಕರಿಗೆ ವ್ಯಾಪಕ ಸೌಲಭ್ಯಗಳನ್ನು ಒದಗಿಸಲಿದೆ. ಪ್ರಸ್ತಾವಿತ ಸ್ಕೈವಾಕ್‌ನ ದೃಶ್ಯವನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ.



ಪ್ರಸ್ತಾವಿತ ಸ್ಕೈವಾಕ್ ನಿಂದ ರಾತ್ರಿ ದೃಶ್ಯ



ಪ್ರಸ್ತಾವಿತ ಸ್ಕೈವಾಕ್‌ನ ಅಂತರಿಕ್ಷ ನೋಟ




ಪ್ರಸ್ತಾವಿತ ಸ್ಕೈವಾಕ್‌ನ ಕೆಳಗಡೆ ಪಾದಚಾರಿ ಮತ್ತು ಮಾರಾಟಗಾರರ ಪ್ರದೇಶ

Kindly send your opinion to
banashankariskyover@bmrc.co.in